‘ಇರ್ವಿನ್‌ನಲ್ಲಿ ಅಪ್ಪ ಖುಷಿಗಾಗಿ ಟೆನಿಸ್ ಆಡುತ್ತಿದ್ದರು. ಅವರನ್ನು ನೋಡಿ ಅಣ್ಣನೂ ಆಡಲಾರಂಭಿಸಿದ. ಅವನು ಇನ್ನೂ ಒಂದು ಹಂತ ಮುಂದಕ್ಕೆ ಹೋಗಿ, ವಿಶ್ವವಿದ್ಯಾಲಯದ ಟೂರ್ನಿಗಳಲ್ಲಿ ಆಡಿದ. ನಾನು ಸ್ಥಳೀಯ ಕ್ಲಬ್‌ಗೆ ಸೇರಿದೆ. ಕ್ರಮೇಣ ವೃತ್ತಿಪರ ಟೆನಿಸ್ ಆಡುವ ಬಯಕೆ ಮೂಡಿತು’ ಎಂದು ನಿಶೇಷ್ ತನ್ನ ಟೆನಿಸ್ ಪ್ರಯಾಣ ಶುರುವಾದ ಸಂದರ್ಭವನ್ನು ನೆನಪಿಸಿಕೊಂಡರು.

ನಿಶೇಷ್‌ಗೆ ಟೆನಿಸ್‌ನ ಮೊದಲ ಪಾಠ ಹೇಳಿಕೊಟ್ಟವರು ಬ್ರಯಾನ್ ಸ್ಮಿತ್. ಇಂಡಿಯಾನಾದಲ್ಲಿ ತಮ್ಮ ನೆರೆಯವರಾಗಿದ್ದ ರಾಜೀವ್ ರಾಮ್ ಅವರಿಂದಲೂ ನೆರವು ದೊರೆಯಿತು. ರಾಜೀವ್ ರಾಮ್ ಅವರು ಟೆನಿಸ್ ಡಬಲ್ಸ್‌ನಲ್ಲಿ ಒಂದು ಕಾಲದಲ್ಲಿ ನಂಬರ್ ಒನ್ ಜೋಡಿಯಲ್ಲಿ ಒಬ್ಬರೆನಿಸಿಕೊಂಡಿದ್ದವರು. ಅವರು ಈಗಲೂ ನಿಶೇಷ್‌ಗೆ ಮಾರ್ಗದರ್ಶಕರಾಗಿ ಇದ್ದಾರೆ.

ಹದಿನೇಳನೇ ವಯಸ್ಸಿನಲ್ಲಿ ಅಮೆರಿಕ ಓಪನ್ ಬಾಲಕರ ವಿಭಾಗದಲ್ಲಿ ನಿಶೇಷ್ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು. ಕೋವಿಡ್ ಕಾರ್ಮೋಡ ಸರಿದು, ಭರವಸೆಯ ಆಶಾಕಿರಣ ಆಗಿನ್ನೂ ಮೂಡಿದ್ದ, 2022ರಲ್ಲಿನ ವಿಜಯ ಇದು. ಅಗ್ರ 200 ಆಟಗಾರರ ಪಟ್ಟಿಯನ್ನು ಸೇರಿಕೊಳ್ಳಲು ಆ



ಗೆಲುವು ಮೆಟ್ಟಿಲಾಯಿತು. 2024ರ ಸೆಪ್ಟೆಂಬರ್ 30ರ ಹೊತ್ತಿಗೆ ವಿಶ್ವದ ನಂ. 199ನೇ ಆಟಗಾರನಾಗಿ ನಿಶೇಷ್ ಬೆಳೆದಿದ್ದ.

ಐದಡಿ ಹನ್ನೊಂದು ಇಂಚು ಎತ್ತರದ ನಿಶೇಷ್ ದೇಹ ತೂಕ 70 ಕೆ.ಜಿ. ಈ ಬಲಗೈ ಆಟಗಾರ ಸ್ಟಾನ್‌ಫೋರ್ಡ್ ವಿಶ್ವವಿದ್ಯಾಲಯಕ್ಕೆ ಸೇರಿದ ಮೇಲೆ ಟೆನಿಸ್ ಆಟಕ್ಕೆ ವೇಗ ದೊರೆಯಿತು. 2024ರಲ್ಲಿ ತನ್ನ ಮೂರನೇ ಚಾಲೆಂಜರ್ ಫೈನಲ್‌ನಲ್ಲಿ ನಿಶೇಷ್ ಸೋಲುಂಡರು. ಎಡಾಸ್ ಬಟ್‌ವಿಲಾಸ್ ಎಂಬ ತಮಗೆ ತಿಳಿದಿರುವ ಆಟಗಾರನ ಎದುರಿನ ಆ ಪರಾಜಯದಿಂದ ಹಲವು ಪಾಠಗಳನ್ನು ಕಲಿತರು. ಅನಂತರ ಟಬ್ಯುರನ್ ಚಾಲೆಂಜರ್ ಟೂರ್ನಿಯಲ್ಲಿ ಎಲಿಯಟ್ ಸ್ಪಿಜಿರಿ ಎದುರು ಗೆದ್ದು, ಚೊಚ್ಚಲ ಕಪ್ ಅನ್ನು ಎತ್ತಿಹಿಡಿದರು.

ಅಲ್ಲಿಂದಾಚೆಗೆ ಅವರು ಮುಟ್ಟಿದ್ದೆಲ್ಲ ಚಿನ್ನವಾಗುತ್ತಾ ಬಂದಿತು. ಶಾಂಪೇನ್ ಚಾಲೆಂಜರ್ ಟೆನಿಸ್ ಟೂರ್ನಿಯಲ್ಲಿ ಫೈನಲ್ಸ್ ಪ್ರವೇಶಿಸಿದರು. ಪ್ಯೂರ್ಟೋ ವಲರ್ಟಾ ಓಪನ್ ಟೆನಿಸ್‌ನಲ್ಲಿ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡರು. ಈ ವಿಜಯದ ನಂತರ ಅವರು ವಿಶ್ವ ರ‍್ಯಾಂಕಿಂಗ್‌ನಲ್ಲಿ 139ನೇ ಆಟಗಾರರಾಗಿ ಬಡ್ತಿ ಪಡೆದಿದ್ದರು. 2024ರ ನವೆಂಬರ್ ಹೊತ್ತಿಗೆ ಈ ಮಟ್ಟಕ್ಕೆ ಅವರು ಏರಿದ್ದು, ಟೆನಿಸ್‌ನಲ್ಲಿ ಭರವಸೆ ಇಟ್ಟುಕೊಳ್ಳಬಹುದು ಎನ್ನುವ ಭಾವನೆ ಮೂಡಿಸಿತು.

2024ರ ನೆಕ್ಸ್ಟ್‌ಜನರೇಷನ್ ಎಟಿಪಿ ಫೈನಲ್ಸ್ ಪ್ರವೇಶಿಸಿದ ನಂತರವಂತೂ ಅವರು ಗ್ರ್ಯಾನ್ ಸ್ಲ್ಯಾಮ್ ಪ್ರವೇಶಿಸುವುದು ಬಹುತೇಕ ಖಾತರಿಯಾಯಿತು. ಆ ಟೂರ್ನಿಯಲ್ಲಿ ಪ್ರಶಸ್ತಿಯನ್ನು ಎತ್ತಿಹಿಡಿದ ಅವರು, ಎನ್‌ಸಿಎಎ (ನ್ಯಾಷನಲ್ ಕಾಲಿಜಿಯೇಟ್ ಅಥ್ಲೆಟಿಕ್ ಅಸೋಸಿಯೇಷನ್)ನಲ್ಲಿ ಆಡುವ ಅರ್ಹತೆಯನ್ನು ಗಿಟ್ಟಿಸಿಕೊಂಡರು. ಆಸ್ಟ್ರೇಲಿಯಾ ಓಪನ್‌ಗೆ ವೈಲ್ಡ್ ಕಾರ್ಡ್ ಪ್ರವೇಶ ಪಡೆದ ಅವರು, ತಮ್ಮ ಆರಾಧ್ಯದೈವದ ಎದುರಲ್ಲೇ ಆಡಲು ನಿಂತಿದ್ದು ಹೊಸಕಾಲದ ಮಾಯೆಯಂತೆ ಕಂಡಿತ್ತು.

ಈ ವರ್ಷ ಎಲ್ಲರೂ ಇನ್ನೂ ಶುಭಾಶಯ ವಿನಿಮಯ ಮಾಡುವುದೇ ಮುಗಿದಿಲ್ಲ, ಅಷ್ಟರಲ್ಲಿ ನಿಶೇಷ್ ಬ್ರಿಸ್ಬೇನ್ ಇಂಟರ್‌ನ್ಯಾಷನಲ್ ಟೂರ್ನಿಯಲ್ಲಿ ಬೋರ್ನಾ ಗೋಜೊ ಅವರನ್ನು ಮೊದಲು ಮಣಿಸಿದರು. 100ರ ಒಳಗಿನ ರ‍್ಯಾಂಕಿಂಗ್‌ನ ಆಟಗಾರ ಬೋರ್ನಾ. ಅದಾದ ನಂತರ ಮಾಜಿ ಟಾಪ್ ಟೆನ್ ಆಟಗಾರ ಲ್ಯೂಕಸ್ ಪೌಲಿ ಅವರನ್ನೂ ಸೋಲಿಸಿದರು. ಒಂದು ವಾರದ ನಂತರ ಎಎಸ್‌ಬಿ ಕ್ಲಾಸಿಕ್ ಟೂರ್ನಿಗೆ ಅರ್ಹತೆ ಪಡೆದು ಅಲ್ಲಿಯೂ ನೇರ ಸೆಟ್‌ಗಳಲ್ಲಿ ಫ್ರಾನ್ಸಿಸ್ಕೊ ಕೊಮೆಸಾನ ಅವರನ್ನು ಪರಾಭವಗೊಳಿಸಿದರು. ವಿಶ್ವದ ನಂ. 23ನೇ ಆಟಗಾರ ಅಲೆಜಾಂಡ್ರೊ ಟ್ಯಾಬಿಲೊ ಅವರನ್ನು ಸೋಲಿಸಿ, ಎಟಿಪಿ ಕ್ವಾರ್ಟರ್ ಫೈನಲ್ ತಲುಪಿದಾಗ 115ನೇ ರ‍್ಯಾಂಕ್‌ಗೆ ನಿಶೇಷ್ ಜಿಗಿದರು.

ನೊವಾಕ್ ಜೊಕೊವಿಚ್ ಅವರಿಗೆ ಈಗ 37 ವರ್ಷ ವಯಸ್ಸು. ಅವರೂ ಹದಿನೆಂಟರ ಹರೆಯದಲ್ಲೇ ಗ್ರ್ಯಾನ್ ಸ್ಲ್ಯಾಮ್ ಟೆನಿಸ್‌ಗೆ ಕಾಲಿಟ್ಟಿದ್ದವರು. ಅವರ ಎದುರು 19ರ ಹುಡುಗ ಆಡುವ ಸಂದರ್ಭ ಟೆನಿಸ್‌ಪ್ರಿಯರಿಗೆ ಒಂದು ಬಗೆಯಲ್ಲಿ ಹಬ್ಬದಂತೆ. ಉತ್ಸಾಹ ಮೈಗೂಡಿಸಿಕೊಂಡ ಕುದಿರಕ್ತದ ಹುಡುಗರು ಮಾಗಿದ ಆಟಗಾರನಿಗೆ ಸವಾಲೊಡ್ಡುವುದು, ಅಲ್ಲಿಂದ ಅನುಭವದ ಜವಾಬು ಬರುವುದನ್ನು ನೋಡುವುದೇ ಸೊಗಸು.

ಆಸ್ಟ್ರೇಲಿಯಾ ಓಪನ್ ಮೊದಲ ಸುತ್ತಿನ ಪಂದ್ಯ ಆಡಿದಾಗ ನಿಶೇಷ್ ಮನಸ್ಸಿನಲ್ಲಿ ತಳಮಳ ಇದ್ದುದಂತೂ ನಿಜ. ಅಂಥ ದಿಗ್ಗಜ ಆಟಗಾರನ ಎದುರು ಸಾರಸತ್ವವನ್ನೆಲ್ಲ ಬಸಿದು ಆಡಬೇಕೆಂಬ ಉತ್ಕಟತೆಯೇ ನರತಂತುಗಳ ಮೇಲೆ ಒತ್ತಡ ಹೇರಿರಲಿಕ್ಕೂ ಸಾಕು.

‘ನಿಶೇಷ್ ಆಟದಲ್ಲಿ ಕಸುವಿದೆ. ಮುಂದೆ ಇನ್ನಷ್ಟು ಒಳ್ಳೆಯ ಟೆನಿಸ್ ಅನ್ನು ಈ ಹುಡುಗನಿಂದ ನಾವು ನೋಡಬಹುದು’ ಎಂಬ ಜೊಕೊವಿಚ್ ಮಾತನ್ನು ಬಸವರೆಡ್ಡಿ ಕುಟುಂಬದವರು ನೇವರಿಸುತ್ತಾ ಕೂರದೇ ಇರಲು ಹೇಗೆ ತಾನೇ ಸಾಧ್ಯ?

ಪ್ರತಿಕ್ರಿಯಿಸಿ: feedback@sudha.co.in


